RNU AIR DHARWAD

JULY 02, 2025

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ರಾಜ್ಯ ಸಚಿವ ಸಂಪುಟದ** 14 ಸಭೆಯು, ಈ ಮಧ್ಯಾಹ್ನ ಚಿಕ್ಕಬಳ್ಳಾಪುರ ಜಿಲ್ಲೆಯ ಇತಿಹಾಸ ಪ್ರಸಿದ್ಧ ನಂದಿಗಿರಿಧಾಮದಲ್ಲಿ ಆರಂಭಗೊಳ್ಳಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಜರಗುವ ಸಭೆಯಲ್ಲಿ, ಚಿಕ್ಕಬಳ್ಳಾಪುರ ಸೇರಿದಂತೆ ಸಮೀಪವರ್ತಿ ಜಿಲ್ಲೆಗಳ, ಒಟ್ಟು 2 ಸಾವಿರದ 553 ಕೋಟಿ 95 ಲಕ್ಷ ರೂಪಾಯಿ ಮೊತ್ತದ, ಒಟ್ಟು 30 ವಿವಿಧ ಯೋಜನೆಗಳಿಗೆ ಅನುಮೋದನೆ ನೀಡುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಸಚಿವ ಸಂಪುಟ ಸಭೆಗೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಸಂಪುಟ ಸದಸ್ಯರು ಭೋಗ ನಂದೀಶ್ವರ ದೇವಸ್ಥಾನಕ್ಕೆ ತಲುಪಿ, ಶ್ರೀ ದೇವರ ದರ್ಶನ ಪಡೆದರು.

<><><>

**ಇಂದು ಸಾಹಿತಿ, ಸಂಶೋಧಕರಾಗಿದ್ದ** ಹಾಗೂ ವಚನ ಪಿತಾಮಹ ಎಂದು ಖ್ಯಾತರಾದ, ಧಾರವಾಡದ ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರ ಜನ್ಮದಿನ. ಈ ದಿನವನ್ನು ರಾಜ್ಯಾದ್ಯಂತ ವಚನ ಸಾಹಿತ್ಯ ಸಂರಕ್ಷಣಾ ದಿನವಾಗಿ ಆಚರಿಸಲಾಗುತ್ತಿದೆ. ಶ್ರೀ ಬಸವೇಶ್ವರರು ಹಾಗೂ ಶಿವಶರಣರ ವಚನಗಳ ಶೋಧನೆ, ಸಂರಕ್ಷಣೆ ಕಾರ್ಯವನ್ನು ಮಾಡಿದ, ಫ.ಗು ಹಳಕಟ್ಟಿಯವರ, ವಚನ ಸಾಹಿತ್ಯ ಸಂಗ್ರಹ ಕಾರ್ಯದ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ, ಹಿರೆಮಲ್ಲೂರು ಈಶ್ವರನ್ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು ಪ್ರಾಂಶುಪಾಲರಾದ ಡಾಕ್ಟರ ಶಶಿಧರ ತೋಡಕರ....

<><><>

**ಧ್ವನಿ: ಡಾಕ್ಟರ ಶಶಿಧರ ತೋಡಕರ 39 ಸೆಕೆಂದುಗಳು**

<><><>

**ಖ್ಯಾತ ಸಾಹಿತಿ, ಸಂಶೋಧಕರಾದ** ಧಾರವಾಡದ ಫ.ಗು.ಹಳಕಟ್ಟಿ ಅವರ ಜನ್ಮದಿನೋತ್ಸವದಂದು ನವ ಮತ್ತು ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವರಾದ ಪ್ರಲ್ಹಾದ್ ಜೋಶಿ ಅವರು ತಮ್ಮ ನಮನಗಳನ್ನು ಸಲ್ಲಿಸಿದ್ದಾರೆ. ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಕರ್ನಾಟಕ ಏಕೀಕರಣ ಪರಿಷತ್, ಅಖಿಲ ಭಾರತ ವೀರಶೈವ ಮಹಾಸಭೆ ಹಾಗೂ 12ನೇ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯ ಎಂದಿದ್ದಾರೆ.

<><><>

**ಫ. ಗು ಹಳಕಟ್ಟಿಯವರ** ಜನ್ಮದಿನದಂದು ಸಾಮಾಜಿಕ ಜಾಲತಾಣದಲ್ಲಿ, ತಮ್ಮ ಭಕ್ತಿಪೂರ್ವಕ ನಮನಗಳನ್ನು ಸಲ್ಲಿಸಿರುವ, ಕೈಗಾರಿಕೆ ಖಾತೆ ಸಚಿವ ಎಂ.ಬಿ ಪಾಟೀಲ ಅವರು, ಶರಣ ಸಾಹಿತ್ಯ ಸಂರಕ್ಷಣೆಯ ಜೊತೆ, ವಿಜಯಪುರದಲ್ಲಿ, ಬಿ.ಎಲ್.ಡಿ.ಇ ಸಂಸ್ಥೆ ಸ್ಥಾಪಿಸಿದ ಫ.ಗು ಹಳಕಟ್ಟಿಯವರು, ಶಿಕ್ಷಣ ಕ್ಷೇತ್ರದ ಅಭ್ಯುದಯಕ್ಕೂ ಕಾರಣರಾಗಿದ್ದರು ಎಂದು ಸ್ಮರಿಸಿದ್ದಾರೆ.

<><><>

**ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ,** ಪ್ರಾಣಾರ್ಪಣೆ ಮಾಡಿದ ವೀರರನ್ನು ಸ್ಮರಿಸಿ, ಎಲ್ಲರೂ ಪ್ರೇರಣೆ ಪಡೆಯುವಂತಾಗಬೇಕು ಎಂದು ಧಾರವಾಡದ ಸಹಾಯಕ ಪೊಲೀಸ್ ಕಮಿಷನರ್ ಪ್ರಶಾಂತ ಶಿವನಗೌಡರ ಹೇಳಿದರು. 1921 ಜುಲೈ 1 ರಂದು, ಬ್ರಿಟಿಷರ ವಿರುದ್ಧ ಹೋರಾಡಿ, ಮಡಿದು ಹುತಾತ್ಮರಾದ ಧಾರವಾಡದ ಮಲ್ಲಿಕ್ ಸಾಬ್ ಗೌಸ್ ಸಾಬ್, ಅಬ್ದುಲ್ ಗಫಾರ ಚೌಕಥಾಯಿ ಅವರ ಜಕಣಿಭಾವಿಯಲ್ಲಿರುವ ಸ್ಮಾರಕಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಗಣ್ಯರು, ಶಾಲಾ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

<><><>

**ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲೂಕು,** ಶ್ರೀಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾದ ತುರ್ತು ಪರಿಸ್ಥಿತಿ ಹೇರಿಕೆಯಾದ 50 ವರ್ಷಗಳ, ಸಂವಿಧಾನ ಹತ್ಯಾ ದಿನಾಚರಣೆಯನ್ನು ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ ಕೃಷ್ಣದತ್ತ ಒಡೆಯರ್ ಉದ್ಘಾಟಿಸಿದರು. ತುರ್ತು ಪರಿಸ್ಥಿತಿ ಸಂದರ್ಭದ ಕರಾಳತೆಯನ್ನು ದರ್ಶಿಸುವ ಚಿತ್ರ ಪ್ರದರ್ಶನವನ್ನು ಆಯೋಜಿಸಲಾಯಿತು.

<><><>

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ** ಇಲಾಖೆ ವತಿಯಿಂದ, ಗ್ರಾಮೀಣ ಪ್ರದೇಶಗಳ 200 ಅರಿವು ಕೇಂದ್ರಗಳನ್ನು, ಜನಸ್ನೇಹಿ ಹಾಗೂ ವಿಶೇಷ ಚೇತನಸ್ನೇಹಿಯಾಗಿಸುವ ನಿಟ್ಟಿನಲ್ಲಿ, ಆರಂಭಿಸಲಾದ ತರಂಗಿಣಿ ಯೋಜನೆ, ಅಲೆಕ್ಸಾ ಸಹಾಯಕ ಸಾಧನಗಳ ವಿತರಣೆಗೆ ವಿಕಾಸಸೌಧದಲ್ಲಿ ಚಾಲನೆ ನೀಡಲಾಗಿದೆ. ತರಂಗಿಣಿ ಕಾರ್ಯಕ್ರಮದಡಿ ವಿತರಿಸಲಾದ, ಅಲೆಕ್ಸಾ ಇಲೆಕ್ಟ್ರಾನಿಕ್ ಸಹಾಯಕ ಸಾಧನಗಳು, ದೃಷ್ಟಿದೋಷವಿರುವವರಿಗೆ ಗ್ರಂಥಾಲಯ ಹಾಗೂ ಸರ್ಕಾರಿ ಕಚೇರಿಗಳಲ್ಲಿ ಶ್ರವಣ ಮಾಧ್ಯಮವಾಗಿ ಸಹಕಾರಿಯಾಗಲಿವೆ.

<><><>

**ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕಿನ** ಮೀಣ್ಯಂ ಅರಣ್ಯ ಪ್ರದೇಶದಲ್ಲಿ ವಿ ‍ ಪ್ರಾಶನದಿಂದ ಮೃತಪಟ್ಟ, 5 ಹುಲಿಗಳ ಸಾವಿನ ಪ್ರಕರಣದ ನ್ಯಾಯಾಂಗ ತನಿಖೆಯನ್ನು, ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ನಡೆಸಬೇಕು ಎಂದು ನಿವೃತ್ತ ಐಎಫ್ಎಸ್ ಅಧಿಕಾರಿ ಡಾಕ್ಟರ ಆರ್.ರಾಜು ಆಗ್ರಹಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

<><><>